# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 405 |
| ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮ. ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 16-02-2023 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿಯವರು |

*****

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಜಲಮಂಡಳಿಯು ಪ್ರತಿ ನಿತ್ಯ ಬೆಂಗಳೂರಿಗರಿಗೆ ಯಾವ ಯಾವ ಮೂಲಗಳಿಂದ ಎಷ್ಟು ಪ್ರಮಾಣದ ನೀರನ್ನು ಸರಬರಾಜು ಮಾಡುತ್ತಿದೆ (ಅಂಕಿ ಅಂಶ ಸಹಿತ ವಿವರ ಒದಗಿಸುವುದು) | ಬೆಂಗಳೂರು ನಗರಕ್ಕೆ ದಿನಂಪ್ರತಿ ಕಾವೇರಿ ಮೂಲದಿಂದ ಸುಮಾರು 1450 ದಶಲಕ್ಷ ಲೀಟರ್ ರಷ್ಟು ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ. |

| ಕ್ರ ಸಂ | ಕಾವೇರಿ ಹಂತ | ಪ್ರಮಾಣ |
|---|---|---|
| 01 | ಕಾವೇರಿ 1ನೇ ಹಂತ | 135.00 ದ.ಲೀ |
| 02 | ಕಾವೇರಿ 2ನೇ ಹಂತ | 140.00 ದ.ಲೀ |
| 03 | ಕಾವೇರಿ 3ನೇ ಹಂತ | 325.00 ದ.ಲೀ |
| 04 | ಕಾವೇರಿ 4ನೇ ಹಂತ 1ನೇ ಘಟ್ಟ | 300.00 ದ.ಲೀ |
| 05 | ಕಾವೇರಿ 4ನೇ ಹಂತ 2ನೇ ಘಟ್ಟ | 550.00 ದ.ಲೀ |
| | ಒಟ್ಟು | 1450.00 ದ.ಲೀ |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಈ ನೀರಿನ ಸಂಗ್ರಹಣೆಗೆ ಸರಬರಾಜಿಗೆ ಮುನ್ನ ಒಂದು ಕಿಲೋ ಲೀಟರಿಗೆ ತಗಲುವ ವೆಚ್ಚ ವೆಷ್ಟು; (ವಿವಿಧ ಮೂಲಗಳವಾರು ಅಂಕಿ ಅಂಶ ಒದಗಿಸುವುದು) | ಕಾವೇರಿ ನೀರಿನ ಸಂಗ್ರಹಣೆಗೆ ಸರಬರಾಜಿಗೂ ಮುನ್ನ ಜಲ ಶುದ್ಧೀಕರಣ ಘಟಕದಲ್ಲಿ ರಾಸಾಯನಿಕ ಬಳಕೆ, ವಿದ್ಯುತ್ ಶುಲ್ಕ, ಬಂಡವಾಳ ವೆಚ್ಚ ಹಾಗೂ ನೌಕರರ ಸಂಬಳ ಇತರೆ ವೆಚ್ಚಗಳಿಂದ ಒಂದು ಕಿಲೋ ಲೀಟರಿಗೆ ತಗಲುವ ವೆಚ್ಚ ಸುಮಾರು ರೂ.41.00 ಎಂದು ಅಂದಾಜಿಸಲಾಗಿದೆ. |
| ಇ) | ದಿನವೊಂದಕ್ಕೆ ಮಂಡಳಿಗೆ ಬಳಕೆದಾರರಿಂದ ಸಂಗ್ರಹವಾಗುತ್ತಿರುವ ಒಟ್ಟು ಮೊತ್ತವೆಷ್ಟು; ಮತ್ತು ಯಾವ ಪ್ರಮಾಣಕ್ಕೆ; | ಪ್ರಸ್ತುತ ಬೆಂಗಳೂರು ಜಲಮಂಡಳಿ ವತಿಯಿಂದ ಸುಮಾರು 10.64 ಲಕ್ಷ ಸಂಪರ್ಕಗಳಿಂದ ಪ್ರತಿದಿನ ಸುಮಾರು ರೂ.3.83 ಕೋಟಿಗಳಷ್ಟು ಬೆಂಗಳೂರು ಜಲಮಂಡಳಿಗೆ ನೀರಿನ ಬಿಲ್ಲಿನ ಮುಖಾಂತರ ಬೆಂಗಳೂರು ಜಲಮಂಡಳಿಗೆ ಸಂಗ್ರಹವಾಗುತ್ತಿರುತ್ತದೆ. |
| ಈ) | ಸರಬರಾಜಿನ ವಿವಿಧ ಹಂತದ ನಷ್ಟಗಳ (Loss) ವಿವರವಾರು ಮತ್ತು ಶೇಕಡಾವಾರು ಅಂಕಿ ಅಂಶ ಒದಗಿಸುವುದು; | ಬೆಂಗಳೂರು ನಗರಕ್ಕೆ ಸರಬರಾಜಾಗುತ್ತಿರುವ ನೀರಿನ ಪ್ರಮಾಣದಲ್ಲಿ ಸುಮಾರು 29%ರಷ್ಟು ಪೋಲಾಗುತ್ತಿರುತ್ತದೆ. ವಿವರಗಳು ಈ ಕೆಳಕಂಡಂತ್ತಿರುತ್ತದೆ. |

| ಕ್ರ ಸಂ | ವಿವರ | ಶೇಕಡ |
|---|---|---|
| 1 | ಸಾರ್ವಜನಿಕ ಕೊಳಾಯಿಗಳು | 4% |
| 2 | ಗೃಹ ಸಂಪರ್ಕಗಳ ಕೊಳವೆಗಳಲ್ಲಿ ಸೋರಿಕೆ | 5% |
| 3 | ಜಲಮಾಪಕಗಳ ಲೋಪದೋಷ | 5% |
| 4 | ಕೊಳಗೇರಿ ಪ್ರದೇಶ | 4% |

| | | | | |
|---|---|---|---|---|
| | | 5 | ಹಳೆಯದಾದ / ಶಿಥಿಲಗೊಂಡಿರುವ ನೆಲಮಟ್ಟದ ಜಲಾಶಯದಲ್ಲಿ ಆಗುವ ಸೋರುವಿಕೆ ಹಾಗೂ ಟ್ರಾನ್ಸ್‌ಮಿಷನ್ ಲಾಸಸ್ | 5% |
| | | 6 | ದಿನಂಪ್ರತಿ ರಸ್ತೆಗಳಲ್ಲಿ ಹೆಚ್ಚಿನ ವಾಹನಗಳ ಓಡಾಟದಿಂದ ನೀರಿನ ಕೊಳವೆಗಳ ಸೋರಿಕೆ ಹಾಗೂ ನೀರಿನ ಕೊಳವೆಗಳನ್ನು ಸುಚಿಗೊಳಿಸಲು (ಸ್ಕವರ್) ಉಪಯೋಗಿಸುವ ನೀರಿನ ಪ್ರಮಾಣ | 6% |
| | | | ಒಟ್ಟು | 29% |
| ಉ) | ಈ ರೀತಿಯ ನಷ್ಟಗಳಿಂದ ಮಂಡಳಿಗೆ ಉಂಟಾಗಿರುವ ಆರ್ಥಿಕ ನಷ್ಟದ ಪ್ರಮಾಣವೇನು? ಇದಕ್ಕೆ ಕಾರಣಗಳೇನು ಹಾಗೂ ಪರಿಹಾರೋಪಾಯಗಳೇನು? | ನೀರು ಪೋಲಾಗುತ್ತಿರುವುದರಿಂದ ಬೆಂಗಳೂರು ಜಲಮಂಡಳಿಗೆ ಆಗುತ್ತಿರುವ ಆರ್ಥಿಕ ನಷ್ಟವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಬೆಂಗಳೂರು ಜಲಮಂಡಲಿಯ ವತಿಯಿಂದ ಒಟ್ಟು ರೂ.654 ಕೋಟಿ ವೆಚ್ಚದಲ್ಲಿ ಬೆಂಗಳೂರು ಪಶ್ಚಿಮ, ದಕ್ಷಿಣ ಮತ್ತು ಕೇಂದ್ರ ವಿಭಾಗಗಳ ಒಟ್ಟು ವಿಸ್ತೀರ್ಣ 132.5 ಚ.ಕಿ.ಮೀ ರಲ್ಲಿ ನೀರಿನ ಸೋರಿಕೆಯನ್ನು ತಡೆಗಟ್ಟುವ ಹಾಗೂ ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣವನ್ನು ಕಡಿಮೆಗೊಳಿಸುವ ಕಾಮಗಾರಿಯನ್ನು ಕೈಗೊಂಡು ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣವನ್ನು ಶೇ.29% ರವರೆಗೆ ಕಡಿಮೆಗೊಳಿಸಲಾಗಿರುತ್ತದೆ. ಮುಂದುವರೆದು, ಬೆಂಗಳೂರು ಜಲಮಂಡಳಿಯ ಉತ್ತರ ಹಾಗೂ ಆಗ್ನೇಯ ವಿಭಾಗಟ 22.0 ಚ.ಕಿ.ಮೀ ವ್ಯಾಪ್ತಿಯಲ್ಲಿ ನೀರಿನ ಸೋರಿಕೆಯನ್ನು ತಡೆಗಟ್ಟುವ ಹಾಗೂ ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣವನ್ನು ಕಡಿಮೆಗೊಳಿಸುವ ಕಾಮಗಾರಿಯನ್ನು ಕೈಗೊಂಡಿದ್ದು ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>ಉಳಿದಂತೆ ಬೆಂಗಳೂರು ಜಲಮಂಡಳಿಯ ವ್ಯಾಪ್ತಿಯಲ್ಲಿ ಈಗಾಗಲೇ ಸುಮಾರು 40 ರಿಂದ 50 ವರ್ಷಗಳ ಹಿಂದೆ ಅಳವಡಿಕೆಯಾಗಿರುವ ವಿವಿಧ ವ್ಯಾಸದ ಸಿ.ಐ/ಪಿ.ಎಸ್.ಸಿ ಕೊಳವೆ ಮಾರ್ಗಗಳು ದೀರ್ಘ ಕಾಲದಿಂದ ಬಳಕೆಯಲ್ಲಿದ್ದು ಆಗಿಂದಾಗ್ಯೆ ನೀರು ಸೋರಿಕೆಯಾಗುತ್ತಿರುತ್ತದೆ. ಈ ಹಳೆಯ ಕೊಳವೆ ಮಾರ್ಗಗಳನ್ನು ಬದಲಾಯಿಸಲು ಹಾಗೂ ಹಳೆಯದಾದ ಜಲಸಂಗ್ರಹಗಳನ್ನು ಪುನಃಶ್ಚೇತನಗೊಳಿಸಲು ಬೆಂಗಳೂರು ಜಲಮಂಡಳಿಗೆ ಸುಮಾರು ರೂ.8,000/- ಕೋಟಿಯಷ್ಟು ಹಣ ಬೇಕಾಗಿದ್ದು, ಇದು ಬೆಂಗಳೂರು ಜಲಮಂಡಳಿಗೆ ಆರ್ಥಿಕ ಹೊರೆಯಾಗುವುದರಿಂದ ಈ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಳ್ಳಲು ಕ್ರಮವಹಿಸಲಾಗುತ್ತಿರುತ್ತದೆ.<br><br>ಮುಂದುವರೆದು, ಸಿ.ಪಿ.ಹೆಚ್.ಇ.ಇ.ಓ ಮಾನದಂಡದ ಪ್ರಕಾರ ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣ ಶೇ.15% ಇರಬೇಕಾಗಿರುತ್ತದೆ, ಈ ಗುರಿಯನ್ನು ತಲುಪಲು ಬೆಂಗಳೂರು ಜಲಮಂಡಳಿಯು ಮೇಲಿನ ಎಲ್ಲಾ ಕ್ರಮಗಳನ್ನು ಕೈಗೊಂಡು ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣವನ್ನು ಕಡಿಮೆಗೊಳಿಸಲು ಕ್ರಮ ವಹಿಸಲಾಗುತ್ತಿದೆ. | | |

ಸಂಖ್ಯೆ: ನಅಇ 10 ಎಂಎಸ್ಐ 2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ